Ref.No. 38/2025

WW–2,

ದಿನಾಂಕಃ 20–06–2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ– 2 ನೇ ಪಾರ್ಟಿ ಪರವಾಗಿಃ ಶ್ರೀ. ಬಿ.ಎಲ್.ಜೆ. ವಕೀಲರಿಂದಃ

5) 2015 ರಿಂದ 2023 ರವರೆಗೆ ನಾನು ಎದುರುದಾರ/ ಕೃಷ್ಣ ಆಸ್ಪತ್ರೆಯ ಆವರಣದಲ್ಲಿದ್ದ ಕೃಷ್ಣ ಫಾರ್ಮಸಿಯಲ್ಲಿ ಫಾರ್ಮಸಿಸ್ಟ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ . ಸದರಿ ಅವಧಿಯಲ್ಲಿ 1 ನೇ ಪಕ್ಷಗಾರರೂ ಸಹ ಎದುರುದಾರರ ನನ್ನ ಸಹೋದ್ಯೋಗಿ ಆಗಿದ್ದರು ಎಂದರೆ ಸರಿ.

6) 2022–2023 ಆರ್ಥಿಕ ವರ್ಷದಲ್ಲಿ ನಾನು ಮತ್ತು 1 ನೇ ಪಕ್ಷಗಾರರು , ಕೃಷ್ಣ ಆಸ್ಪತ್ರೆಯ ಆವರಣದಲ್ಲಿದ್ದ ಕೃಷ್ಣ ಫಾರ್ಮಸಿಯ ಹಣ ಸುಮಾರು 35 ರಿಂದ 40 ಲಕ್ಷ ದುರುಪಯೋಗ ಮಾಡಿಕೊಂಡಿದ್ದರಿಂದ , ಫಾರ್ಮಸಿಯ ಮಾಲೀಕರು ನನ್ನನ್ನು ಮತ್ತು 1 ನೇ ಪಕ್ಷಗಾರರನ್ನು ಕರೆಸಿ, ನಮ್ಮಿಬ್ಬರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದಾಗ ನಾನು ರಾಜೀನಾಮೆ ಕೊಟ್ಟಿರುತ್ತೇನೆ , ಮತ್ತು ನನ್ನ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಳ್ಳದಂತೆ ಕೋರಿಕೊಂಡಿರುತ್ತೇನೆ ಎಂದರೆ ಸರಿಯಲ್ಲ .

7) 22.03.2023 ರಿಂದ 1 ನೇ ಪಕ್ಷಗಾರರು ಕೃಷ್ಣ ಆಸ್ಪತ್ರೆಯ ಆವರಣದಲ್ಲಿದ್ದ ಕೃಷ್ಣ ಫಾರ್ಮಸಿಯಲ್ಲಿ ಕೆಲಸಕ್ಕೆ ಬರುವುದನ್ನು ನಿಲ್ಲಿಸಿದರು ಎಂದರೆ ಸರಿ . 1 ನೇ ಪಕ್ಷಗಾರರು ಕೃಷ್ಣ ಆಸ್ಪತ್ರೆಯ ಆವರಣದಲ್ಲಿದ್ದ ಕೃಷ್ಣ ಫಾರ್ಮಸಿಯ ವಿರುದ್ಧ ಕಾರ್ಮಿಕ ಆಯುಕ್ತರ ಮುಂದೆ ದೂರನ್ನು ಸಲ್ಲಿಸಿದರು ಎಂದರೆ ಸರಿ . ಸದರಿ ದೂರು ಕಾರ್ಮಿಕ ಆಯುಕ್ತರು ಮೈಸೂರಿನ ಕಾರ್ಮಿಕ ನ್ಯಾಯಾಲಯಕ್ಕೆ ರೆಫರೆನ್ಸ್ ಕಳುಹಿಸಿದರು ಸದರಿ ಪ್ರಕರಣ ರೆಫರೆನ್ಸ್ ಸಂಖ್ಯೆ 11/2024 ಎಂದು ದಾಖಲಾಗಿದೆ ಎಂದರೆ ಸರಿ .

8) ಆಸ್ಪತ್ರೆಯ ವೈದ್ಯರು ಒಳರೋಗಿಗೆ 10 ಇಂಜೆಕ್ಷನ್ ಗಳನ್ನು ಕೊಡಬೇಕೆಂದು ಸೂಚಿಸಿದ್ದರೂ ಸಹ , ನಾವುಗಳು ಕೇವಲ 4 ಇಂಜೆಕ್ಷನ್ ನ್ನು ರೋಗಿಗೆ ಕೊಟ್ಟು, ಒಟ್ಟು 7 ಒಳರೋಗಿಗಳು ಮೃತರಾಗಲು ಕಾರಣಕರ್ತರಾಗಿರುತ್ತೇವೆ ಎಂದರೆ ಸರಿಯಲ್ಲ . ಕಾರ್ಮಿಕ ನ್ಯಾಯಾಲಯ 1 ನೇ ಪಕ್ಷಗಾರರು ಸಲ್ಲಿಸಿದ್ದ ರೆಫರೆನ್ಸ್ ಸಂಖ್ಯೆ 11/2024 ನ್ನು ವಜಾ ಮಾಡಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪಕ್ಷಗಾರರಿಗೆ ಬೋನಸ್ ಕೊಟ್ಟಿರುವುದಿಲ್ಲ ಎಂಬುದರ ಬಗ್ಗೆ ನನಗೆ ಮಾಹಿತಿ ಇರುತ್ತದೆ.

9) ಕೃಷ್ಣ ಆಸ್ಪತ್ರೆಯ ಆವರಣದಲ್ಲಿದ್ದ ಕೃಷ್ಣ ಫಾರ್ಮಸಿಯ ಆಡಳಿತ ವರ್ಗದವರು ಸಿಬ್ಬಂದಿಗೆ ಸಂಬಳ ಕೊಡುವಾಗ ಪ್ರತಿ ತಿಂಗಳ ಸಂಬಳದೊಂದಿಗೆ ಶೇಕಡಾ 8.33 ಬೋನಸ್ ಮೊತ್ತವನ್ನು ಪ್ರತ್ಯೇಕವಾಗಿ , ಸಿಬ್ಬಂದಿಗೆ ಹಾಜರಾತಿ ದಿನಗಳಿಗೆ ಅನುಗುಣವಾಗಿ ಪ್ರತಿ ಮಾಹೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಿಬ್ಬಂದಿಗೆ ಪ್ರತಿ ತಿಂಗಳು ಸಂಬಳ ಕೊಡುವಾಗ ಸಂಬಳ ಚೀಟಿಯನ್ನು ಪ್ರತಿ ಸಿಬ್ಬಂದಿಗೆ ಕೊಡಲಾಗಿದೆ